ವಿಭಾಗ : DEPARTMENT / SUBJECT: ಸಂಸತ್

ಪತ್ರಿಕೆ : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 03/03/2020

# ಸದನದಲ್ಲೇ ಕೈಕೈ ಮಿಲಾಯಿಸಿಕೊಂಡ ಸಂಸದರು

## ಲೋಕಸಭೆಯಲ್ಲಿ ನಡೆದ ಘಟನೆ । ಅಧಿವೇಶನದ ಮೊದಲ ದಿನವೇ ಗದ್ದಲ । ಉಭಯ ಸದನಗಳಲ್ಲೂ ನಡೆಯದ ಕಲಾಪ

**ಹೊಸದಿಲ್ಲಿ:** ಪ್ರಜಾಪ್ರಭುತ್ವದ ದೇಗುಲ ಎಂದೇ ಹೇಳುವ ಸಂಸತ್‌ನಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರು ಪರಸ್ಪರ ನೂಕಾಟ ನಡೆಸಿದ್ದಲ್ಲದೇ ಕೈಕೈ ಮಿಲಾಯಿಸಿಕೊಂಡಿದ್ದಾರೆ. ಸದಸ್ಯರ ಗದ್ದಲದಿಂದ ಮೂರು ಸಲ ಕಲಾಪ ಮುಂದೂಡಿಕೆ ಕಂಡ ಲೋಕಸಭೆ ಸೋಮವಾರ ಈ ಘಟನೆಗೂ ಸಾಕ್ಷಿಯಾಯಿತು. ಪ್ರತಿಪಕ್ಷಗಳ ಗಲಾಟೆಯಿಂದಾಗಿ ರಾಜ್ಯಸಭೆ ಕಲಾಪವನ್ನೂ ದಿನದಮಟ್ಟಿಗೆ ಮುಂದೂಡಲಾಯಿತು.

ಸಂಸತ್‌ನ ಬಜೆಟ್ ಅಧಿವೇಶನ ಸೋಮವಾರ ಪುನರಾರಂಭಗೊಂಡಿತು. ಶುಕ್ರವಾರ ನಿಧನರಾದ ಹಾಲಿ ಸದಸ್ಯರಾಗಿದ್ದ ಜೆಡಿಯುನ ಬೈದ್ಯನಾಥ್ ಪ್ರಸಾದ್ ಮಹತೋ ಅವರಿಗೆ ಸಂತಾಪ ಸೂಚಿಸಿ ಲೋಕಸಭೆಯ ಕಲಾಪವನ್ನು ಮಧ್ಯಾಹ್ನ 2 ಗಂಟೆಗೆ ಮುಂದೂಡಲಾಯಿತು. ಮಧ್ಯಾಹ್ನ ಕಲಾಪ ಆರಂಭವಾಗುತ್ತಿದ್ದಂತೆಯೇ ಕಾಂಗ್ರೆಸ್ ಸದಸ್ಯರು ಸದನದ ಬಾವಿಗೆ ತೆರಳಿ, ದಿಲ್ಲಿ ಗಲಭೆ ವಿಚಾರ ಮುಂದಿಟ್ಟುಕೊಂಡು ಸರಕಾರದ ವಿರುದ್ಧ ಘೋಷಣೆ ಕೂಗಲಾರಂಭಿಸಿದರು. ಅದಕ್ಕೆ ಮಣಿಯದೆ ಸ್ಪೀಕರ್ ಓಂ ಬಿರ್ಲಾ ಅವರು ಕಲಾಪ ಆರಂಭಿಸಿದಾಗ ಕೆಲವರು ಕಪ್ಪು ಭಿತ್ತಿಪತ್ರಗಳನ್ನು ಹಿಡಿದು ಆಡಳಿತ ಪಕ್ಷದ ಸಾಲಿನತ್ತ ತೆರಳಿದ್ದಲ್ಲದೇ ಗೃಹ ಸಚಿವ ಅಮಿತ್ ಶಾ ರಾಜೀನಾಮೆಗೆ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ ಜೋಶಿ ಅವರು, ''ಗಲಭೆಗೆ ಪ್ರಚೋದನೆ ನೀಡಿದ ಜನ ಇವರು. 1984ರ ಸಿಖ್ ವಿರೋಧಿ ದಂಗೆಯಲ್ಲಿ 3,000 ಜನರನ್ನು ಕೊಂದರು ಮತ್ತು ಆ ಕುರಿತು ಯಾವುದೇ ತನಿಖೆ ನಡೆಸಲಿಲ್ಲ. ನಮ್ಮ ಆದ್ಯತೆ ಈಗ ದಿಲ್ಲಿಯಲ್ಲಿ ಶಾಂತಿ ನೆಲೆಸುವಂತೆ ಮಾಡುವುದಾಗಿದೆ, ಆದರೆ ಇವರಿಗೆ ಉದ್ವಿಗ್ನ ಸ್ಥಿತಿಯೇ ಮುಂದುವರಿಯಬೇಕೆಂಬ ಬಯಕೆ ಇದೆ,'' ಎಂದು ಕಾಂಗ್ರೆಸ್‌ಗೆ ಟಾಂಗ್ ನೀಡಿದರು. ಆಸನಗಳಿಗೆ ತೆರಳಿ ಕಲಾಪ ನಡೆಯಲು ಅನುವು ಮಾಡಿಕೊಡುವಂತೆ ಸ್ಪೀಕರ್ ಮಾಡಿದ ಮನವಿಗೆ ಕಾಂಗ್ರೆಸ್ ಸದಸ್ಯರು ಸ್ಪಂದಿಸಲಿಲ್ಲ. ಬದಲಿಗೆ, 'ನಮಗೆ ನ್ಯಾಯ ಬೇಕು',' 'ಅಮಿತ್ ಶಾ ರಾಜೀನಾಮೆ ನೀಡಲಿ' ಎಂಬ ಘೋಷಣೆಗಳನ್ನು ತೀವ್ರಗೊಳಿಸಿದರು. 'ದ್ವೇಷದ ಭಾಷಣ ನಿಲ್ಲಿಸಿ, ನಮ್ಮ ಭಾರತವನ್ನು ಉಳಿಸಿ' ಎಂಬ ಭಿತ್ತಿಪತ್ರಗಳನ್ನೂ ಪ್ರದರ್ಶಿಸಿದರು.

ಗದ್ದಲದ ನಡುವೆಯೇ ಮಂಡನೆಯಾದ 'ವಿವಾದ್ ಸೆ ವಿಶ್ವಾಸ್' ವಿಧೇಯಕದ ಕುರಿತು ಮಾತನಾಡುತ್ತಿದ್ದ ಬಿಜೆಪಿಯ ಸಂಜಯ್ ಜೈಸ್ವಾಲ್ ಅವರತ್ತ ಕಾಂಗ್ರೆಸ್‌ನ ಗೌರವ್ ಗೊಗೊಯ್ ಮತ್ತು ರವನೀತ್ ಸಿಂಗ್ ಬಿಟ್ಟು ಭಿತ್ತಿಪತ್ರ ಹಿಡಿದು ನುಗ್ಗಿದಾಗ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತು. ಬಿಜೆಪಿ ಸದಸ್ಯರು ಬಾವಿಗೆ ತೆರಳುವಂತೆ ಕಾಂಗ್ರೆಸ್ ಸದಸ್ಯರಿಗೆ ಮನವಿ ಮಾಡಿದರು. ಇಬ್ಬರೂ ಅದಕ್ಕೆ ಒಪ್ಪದೇ ಇದ್ದಾಗ ಉಭಯ ಪಕ್ಷಗಳ ಸದಸ್ಯರೂ ಪರಸ್ಪರ ನೂಕಾಟ, ತಳ್ಳಾಟದಲ್ಲಿ ತೊಡಗಿದರು. ಕೆಲವರು ಸದಸ್ಯರು ಪರಸ್ಪರ ಕೈಕೈ ಮಿಲಾಯಿಸಿಕೊಂಡರು. ಇಷ್ಟೆಲ್ಲ ಆದರೂ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ, ನಾಯಕ ರಾಹುಲ್ ಗಾಂಧಿ ಎಲ್ಲವನ್ನೂ ನೋಡುತ್ತ ಸುಮ್ಮನೆ ಕುಳಿತಿದ್ದರು. ಗದ್ದಲ ನಿಯಂತ್ರಣಕ್ಕೆ ಬರದೇ ಇದ್ದಾಗ ಸ್ಪೀಕರ್ ಮಧ್ಯಾಹ್ನ 3 ಗಂಟೆವರೆಗೆ ಕಲಾಪ ಮುಂದೂಡಿದರು.

**ಬಿಜೆಪಿ ಅಬ್ಬರ:** ಮೂರು ಗಂಟೆಗೆ ಸದನ ಮತ್ತೆ ಸೇರಿದಾಗ ಬಿಜೆಪಿ ಸದಸ್ಯರು ಆಡಳಿತ ಪಕ್ಷದ ಕಡೆಗಿರುವ ಬಾವಿಗೆ ತಡೆಯಾಗಿ ನಿಂತರು. ಕಾಂಗ್ರೆಸ್‌ನ ರಮ್ಯಾ ಹರಿದಾಸ್ ಅವರು ಬಿಜೆಪಿಯ ಮಹಿಳಾ ಸದಸ್ಯೆಯೊಬ್ಬರು ತಮ್ಮ ಮೇಲೆ ಸದನದಲ್ಲೇ ಹಲ್ಲೆ ಮಾಡಿದ್ದಾರೆ ಎಂದು ಆರೋಪಿಸಿದ್ದ ರಿಂದ ಗದ್ದಲ ಮತ್ತಷ್ಟು ಜೋರಾಯಿತು. ಸ್ಪೀಕರ್ ಪೀಠದಲ್ಲಿದ್ದ ಬಿಜೆಪಿಯ ರಮಾದೇವಿ ಅವರು ಮಧ್ಯಾಹ್ನ 4 ಗಂಟೆವರೆಗೆ ಕಲಾಪ ಮುಂದೂಡಿದರು. ಆದರೂ ಬಿಜೆಪಿ ಸದಸ್ಯರು, 'ದೇಶ ಉಳಿಸುವವರು ಯಾರು? ನಾವು ದೇಶ ಉಳಿಸುತ್ತೇವೆ', 'ಮಹಾತ್ಮಗಾಂಧಿ ಅಮರವಾಗಲಿ, ನಕಲಿ ಗಾಂಧಿ ಜೈಲಿಗೆ ಹೋಗಲಿ' ಎಂದು ಘೋಷಣೆ ಕೂಗುತ್ತಲೇ ಇದ್ದರು. ಮೂರನೇ ಬಾರಿಗೆ ಸದನ ಸೇರಿದಾಗಲೂ ಗದ್ದಲ ಮುಂದುವರಿದ ಕಾರಣ ಸ್ಪೀಕರ್ ಓಂ ಬಿರ್ಲಾ ಕಲಾಪವನ್ನು ಮಂಗಳವಾರಕ್ಕೆ ಮುಂದೂಡಿದರು.




ದಿಲ್ಲಿ ಗಲಭೆ ಹಿನ್ನೆಲೆಯಲ್ಲಿ ಗೃಹ ಸಚಿವ ಅಮಿತ್ ಶಾ ರಾಜೀನಾಮೆಗೆ ಆಗ್ರಹಿಸಿ ಕಾಂಗ್ರೆಸ್ ಸಂಸದರು ಸಂಸತ್ ಭವನದ ಗಾಂಧಿ ಪ್ರತಿಮೆ ಎದುರು ಸೋಮವಾರ ಧರಣಿ ನಡೆಸಿದರು.

### ರಾಜ್ಯಸಭೆಯಲ್ಲೂ ಗದ್ದಲ

ದಿಲ್ಲಿ ಗಲಭೆ ಮುಂದಿಟ್ಟುಕೊಂಡು ರಾಜ್ಯಸಭೆಯಲ್ಲಿ ಕಾಂಗ್ರೆಸ್, ಆಪ್, ಟಿಎಂಸಿ, ಎಡಪಕ್ಷಗಳು, ಸಮಾಜವಾದಿ ಪಾರ್ಟಿ, ಬಹುಜನ ಸಮಾಜ ಪಾರ್ಟಿ, ಡಿಎಂಕೆ ಸದಸ್ಯರು ಧರಣಿ ನಡೆಸಿದ್ದರಿಂದ ಕಲಾಪವನ್ನು ಮಂಗಳವಾರಕ್ಕೆ ಮುಂದೂಡಲಾಯಿತು. ಬೆಳಗ್ಗೆ ಕಲಾಪ ಆರಂಭವಾಗುತ್ತಿದ್ದಂತೆಯೇ ಪ್ರತಿಪಕ್ಷಗಳು, ''ದಿಲ್ಲಿಯಲ್ಲಿ ಗಲಭೆ ನಡೆಯುತ್ತಿದ್ದಾಗ ಕೇಂದ್ರ ಸರಕಾರ ನಿದ್ರಿಸುತ್ತಿತ್ತು. ಗೃಹ ಸಚಿವ ಅಮಿತ್ ಶಾ ರಾಜೀನಾಮೆ ನೀಡಬೇಕು,'' ಎಂದು ಆಗ್ರಹಿಸಿ ಧರಣಿ ಆರಂಭಿಸಿದರು. ಹೀಗಾಗಿ ಕಲಾಪವನ್ನು ಮಧ್ಯಾಹ್ನ 2 ಗಂಟೆಗೆ ಮುಂದೂಡಲಾಯಿತು. ನಂತರ ಸದನ ಸೇರಿದಾಗಲೂ ಧರಣಿ ಮುಂದುವರಿದ ಕಾರಣ ಕಲಾಪ ಮುಂದೂಡಲಾಯಿತು.

> ಲೋಕಸಭೆಯಲ್ಲಿ ನಡೆದ ಘಟನಾವಳಿಗಳಿಂದ ನೋವಾಗಿದೆ. ಇಂತಹ ಸನ್ನಿವೇಶದಲ್ಲಿ ಕಲಾಪ ನಡೆಸಲು ನಾನು ಬಯಸುವುದಿಲ್ಲ. ಸದನದ ಘನತೆ ಕಾಪಾಡಬೇಕಾದದ್ದು ಪ್ರತಿ ಸದಸ್ಯರ ಕರ್ತವ್ಯವಾಗಿದೆ.
>
> **- ಓಂಬಿರ್ಲಾ**, ಲೋಕಸಭಾ ಸ್ಪೀಕರ್

### ಗಲಾಟೆ ನಡುವೆಯೇ ವಿಧೇಯಕ ಮಂಡನೆ

ಪ್ರತಿಪಕ್ಷಗಳ ಗಲಾಟೆ ನಡುವೆಯೇ ಲೋಕಸಭೆಯಲ್ಲಿ ಎರಡು ಹಾಗೂ ರಾಜ್ಯಸಭೆಯಲ್ಲಿ ಒಂದು ವಿಧೇಯಕವನ್ನು ಸರಕಾರ ಮಂಡಿಸಿದೆ. ಲೋಕಸಭೆಯಲ್ಲಿ ಖನಿಜ ಕಾಯಿದೆಗಳ ತಿದ್ದುಪಡಿ ವಿಧೇಯಕ, ಗರ್ಭಪಾತಕ್ಕೆ ಅನುಮತಿ ನೀಡುವ ತಿದ್ದುಪಡಿ ವಿಧೇಯಕಗಳನ್ನು ಮಂಡಿಸಲಾಯಿತು. ರಾಜ್ಯಸಭೆಯಲ್ಲಿ ಈಗ ಇರುವ ಮೂರು ಸ್ವಾಯತ್ತ ಸಂಸ್ಕೃತ ವಿಶ್ವವಿದ್ಯಾಲಯಗಳನ್ನು ಕೇಂದ್ರೀಯ ಸಂಸ್ಕೃತ ವಿವಿಗಳಾಗಿ ಪರಿವರ್ತಿಸುವ 'ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯಗಳ ವಿಧೇಯಕ 2019' ಅನ್ನು ಮಂಡಿಸಲಾಯಿತು. ಹೊಸದಿಲ್ಲಿಯ ಲಾಲ್‌ಬಹಾದ್ದೂರ್ ಶಾಸ್ತ್ರಿ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ ಹಾಗೂ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ, ತಿರುಪತಿಯಲ್ಲಿರುವ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠಗಳನ್ನು ಕೇಂದ್ರೀಯ ಸಂಸ್ಕೃತ ವಿವಿಗಳೆಂದು ಘೋಷಿಸುವ ಈ ವಿಧೇಯಕಕ್ಕೆ ಲೋಕಸಭೆ ಈಗಾಗಲೇ ಅನುಮತಿ ನೀಡಿದೆ.

### ಕಾಂಗ್ರೆಸ್ ಸದಸ್ಯೆಯಿಂದ ಹಲ್ಲೆ ದೂರು

ಕಾಂಗ್ರೆಸ್ ಸದಸ್ಯೆ ರಮ್ಯಾ ಹರಿದಾಸ್ ಅವರು ಬಿಜೆಪಿ ಸಂಸದೆ ಜಸ್‌ಕೌರ್ ಮೀನಾ ತಮ್ಮ ಮೇಲೆ ಹಲ್ಲೆ ನಡೆಸಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸ್ಪೀಕರ್ ಓಂಬಿರ್ಲಾ ಅವರಿಗೆ ದೂರು ನೀಡಿದ್ದಾರೆ. ತಾವು ಮಾತನಾಡುತ್ತಿದ್ದಾಗ ಕಾಂಗ್ರೆಸ್ ಸದಸ್ಯರು ತಮ್ಮ ಆಸನದ ಸಮೀಪವೇ ಬಂದು ಮಾತನಾಡಲು ಅಡ್ಡಿಪಡಿಸಿದ್ದಾರೆ ಎಂದು ಬಿಜೆಪಿಯ ಸಂಜಯ್ ಜೈಸ್ವಾಲ್ ಆರೋಪಿಸಿದ್ದಾರೆ. ಸಂಸತ್‌ನ ಚಳಿಗಾಲದ ಅಧಿವೇಶನದಲ್ಲಿ ರಮ್ಯಾ ಸೇರಿದಂತೆ ಕಾಂಗ್ರೆಸ್‌ನ ಇಬ್ಬರು ಸಂಸದೆಯರು, ಮಾರ್ಷಲ್‌ಗಳು ತಮ್ಮ ಮೇಲೆ ಹಲ್ಲೆ ನಡೆಸಿದ್ದಾರೆಂದು ಸ್ಪೀಕರ್‌ಗೆ ದೂರು ನೀಡಿದ್ದರು. ಅದೇ ಅಧಿವೇಶನದಲ್ಲಿ ಕಾಂಗ್ರೆಸ್ ಸದಸ್ಯರು ಸಚಿವರೊಬ್ಬರ ಆಸನದ ಬಳಿ ತೆರಳಿ ಹಲ್ಲೆ ನಡೆಸಲು ಮುಂದಾಗಿದ್ದ ಘಟನೆಯೂ ನಡೆದಿದೆ.

